# ಕನ್ನೆಯ ಸ್ನೇಹ

ಬದುಕಿನ ವಿಲಕ್ಷಣತೆಗಳಲ್ಲಿ ಇದೂ ಒಂದು– ಬೆಳೆದಂತೆ ಮನುಷ್ಯ ಸ್ವಾರ್ಥಿಯಾಗುವುದು! ಬಾಲ್ಯದ ಮುಗ್ಧತೆ–ಬಾಲಿಷತೆ ಕಳೆದು ಯೌವನದಲ್ಲಿ ಆದರ್ಶವಾದಿಗಳಾಗಿರುವುದೂ, ಯೌವನ ಕಳೆಯುತ್ತಿದ್ದಂತೆ, ಆದರ್ಶದ ಗುಂಗು ಇಳಿಯುತ್ತಿದ್ದಂತೆ, ನಡು ವಯಸ್ಸು ದೇಹ– ಮನಸ್ಸುಗಳ ಮೇಲೆ ಎರಗುತ್ತಿದ್ದಂತೆ ಜನ ದುಡ್ಡಿನಾಸೆಗೆ; ಅಧಿಕಾರದ ಆಸೆಗೆ; ಹೆಸರಿನ ಆಸೆಗೆ ಬಲಿಯಾಗಿ ಪರಮಸ್ವಾರ್ಥಿಗಳಾಗುತ್ತಿರುವುದೂ. 'ಆ ಅವರೆ ಈ ಇವರೆ?' ಎನ್ನುವ ಸಂದೇಹಬರುವಂತಾಗುವುದೂ ಲೋಕದಲ್ಲಿ ನಾವು ನೊಡುತ್ತಲೇ ಇರುವ ವಿದ್ಯಮಾನ. ಮತ್ತು ಈ ಲೋಕದಿಂದ ನಾವೇನೂ ಹೊರತಲ್ಲ. ಬಾಲ್ಯವೊಂದು ಆಟ; ಯೌವನವೊಂದು ಕಾಮ– ಪ್ರೇಮಗಳ ಧೂಳೆದ್ದ ರಂಗಸ್ಥಳ, ನರೆ ಮುಪ್ಪು ಚಿಂತೆಗಳ ಗೂಡು– ಹೀಗಿರುವಲ್ಲಿ ಈ ಬದುಕಿನಲ್ಲಿ ಎಲ್ಲಿದೆ ಸತ್ಯವನ್ನು ಅರಸಲು ವ್ಯವಧಾನ? ಎಂದು 'ಭಜಗೋವಿಂದಮ್' ಹಾಡು ಹೇಳುವಲ್ಲಿ ಮುಪ್ಪಿನ ಚಿಂತೆ ಮುಖ್ಯವಾಗಿ ಕಳೆದುಹೋದ ಯೌವನದ ಚಿಂತೆ– ಕಾಮದ ಚಿಂತೆ ಎಂದು ಕೂಡ ಸೂಚಿಸುತ್ತದೆ.

'ಭಜಗೋವಿಂದ'ದ ಮಾತು ಲೋಕಕ್ಕೆ ಉಪದೇಶದ ಮಾತು. ಇಂಥದೇ ಮಾತನ್ನು ತನ್ನ ಅನುಭವವೆನ್ನುವಂತೆ ಕವಿ ಹೇಳುವನು. ಉಪದೇಶದ ಮಾತು ಬೇಕು; ಅನುಭವದ ಮಾತು ಬೇಡವೇ? ಉಪದೇಶದ ಮಾತಿನಿಂದ ಅನುಭವವನ್ನು ಇನ್ನೊಮ್ಮೆ ನೆನಪು ಮಾಡಿಕೊಳ್ಳುವಂತೆ, ಅನುಭವದ ಮಾತಿನಿಂದ ಪರೋಕ್ಷವಾಗಿ ಉಪದೇಶವನ್ನು ಲೋಕ ಊಹಿಸಿಕೊಳ್ಳುತ್ತದೆ. ವಾಙ್ಮಯದಲ್ಲಿ ಯಾವಾಗಲೂ ಪರೋಕ್ಷವು ಹೆಚ್ಚಿನ ಬಲವುಳ್ಳದ್ದು. ಹೆಚ್ಚು ಹರಿತ. ಕಲ್ಪನೆಯ ಪ್ರಭಾವವು ಮನಸ್ಸಿನ ಮೇಲೆ ವಾಸ್ತವಕ್ಕಿಂತಲೂ ಹೆಚ್ಚು! ಇದೊಂದು ಆಶ್ಚರ್ಯವೇ.

ನಮ್ಮ ಅಂಬಿಕಾತನಯದತ್ತರ ಒಂದು ಪದ್ಯ ಇಲ್ಲಿದೆ. ಇದು ಕವಿ ಅರುವತ್ತು ಕಳೆದ ಮೇಲೆ ಬರೆದದ್ದು. ಪದ್ಯಕ್ಕೆ ಮೊದಲು 'ಗೆ' ಎಂಬ ಅರ್ಥ ಪೂರ್ಣ ಶೀರ್ಷಿಕೆ ಇತ್ತು. ಈಗ 'ಕದ್ದು ನೋಡುವ ಕನ್ಯೆ' ಎಂಬ ಶೀರ್ಷಿಕೆ ಇದೆ. ತಾನು ಕದ್ದು ನೋಡುವ ಕನ್ಯೆಯೂ ಹೌದು; ತನ್ನನ್ನು ಕದ್ದು ನೋಡುವ ಕನ್ಯೆಯೂ ಹೌದು. 'ಸಂಚಿನ ನೋಟ ಒಂದೇ' ಎಂದು ಅಲ್ಲಮ ಹೇಳಿದ್ದು ನೆನಪಾಗುತ್ತದೆ!

ಕವಿಯ ಮನದಲ್ಲಿ ಆ ಹುಡುಗಿಯ ಚಿತ್ರ ಮತ್ತೆ ಮತ್ತೆ ಮೂಡುತ್ತಿದೆ. ಮೂಡಿ, ಮನದ ಉಳಿದ ಭಾವಗಳನ್ನು ತನ್ನಂತೆ ತಿದ್ದುತ್ತಿದೆ. ತಾನೇ ತಾನಾಗಿದೆ. ಕವಿ; ಲೋಕದಲ್ಲಿ ಪ್ರಖ್ಯಾತನಾದ ಕವಿ. ತನ್ನ ಮನದಲ್ಲಿ ಹೀಗಾಗುತ್ತಿದೆ ಎಂದು ಲೋಕದ ಮುಂದೆ ಹೇಳುವುದು ಹೇಗೆ?' ತಿದ್ದುತ್ತಿದೆ ರಾಗದಲ್ಲಿ ಚಿತ್ತವೃತ್ತಿಗಳನ್ನು; ಆಡುವದೆಂತು ಜನದಲ್ಲಿ?'

ಲೋಕವನ್ನು ಮರೆತು, ಆ ಅನುಭವವನ್ನು ಮತ್ತೆ ಮರುಕಳಿಸಿಕೊಳ್ಳುತ್ತಿದ್ದಾರೆ– ಕವಿ.

'ಮುಗ್ಧ ಕುವರಿಯೇ, ನಾನು ಗೃಹಿಯಾಗಿ ನಿನ್ನನ್ನು ನಲ್ನೋಟ ಬೇಟಕೆಳಸಿ, ದುಗ್ಧದೃಷ್ಟಿಯನಿಂದು, ಕದಡಿಸಿದೆ ಕಣ್ಣ ತಾರಾಮೈತ್ರಿಯನ್ನು ಬೆಳೆಸಿ' ತಪ್ಪು ನನ್ನದೇ ಎನ್ನುತ್ತಿದ್ದಾರೆ. ನೀನು ಮುಗ್ಧೆ. ನಿನ್ನದು ಹಾಲ್ ಬಿಳುಪಿನ ನೋಟ. ಕವಡರಿಯದ ನೋಟ. ನಾನಲ್ಲಿ ಕಪ್ಪು ಚುಕ್ಕಿಯನ್ನಿಟ್ಟೆ! ಕದಡಿಸಿಬಿಟ್ಟೆ; ಎನ್ನುತ್ತಿದ್ದಾರೆ. 'ತಾರಾ' ಎಂದರೆ ಕಣ್ಣಿನ ಕಪ್ಪು. ಕನೀನಿಕೆ. ಬೇಟಕೆಳಸಿದ ಕಣ್ಣಿನಿಂದ ನಿನ್ನನ್ನು ನೋಡಿ, ನಾನು ಗೃಹಸ್ಥನಾಗಿದ್ದೂ ಕನ್ಯೆಯಾಗಿದ್ದ ನಿನ್ನನ್ನು ಹಾಗೆ ನೋಡಿ, ನಿನ್ನ ದುಗ್ಧ ಧವಲದಲ್ಲಿ ಕಪ್ಪು ಚುಕ್ಕೆಯಂತಾದೆ! ಆದರೂ ತಾರಾ ಮೈತ್ರಿ ಬೆಳೆದು ಬಿಟ್ಟಿತು! ಲೋಕವನ್ನು ನೋಡಬಲ್ಲ ಕಣ್ಣಿನ ಕಪ್ಪು– ಕಪ್ಪು ಚುಕ್ಕೆಯಂತಾಗಿಬಿಟ್ಟಿತು. ಕವಿ; ತನ್ನನ್ನೇ ತಾನು ತೀವ್ರವಾಗಿ ಹೀಗಳೆದುಕೊಳ್ಳುವ ತೀವ್ರವಾದ ಪರಿ ಇದು. 'ಅತ್ತಲಿತ್ತ ನೋಡದಂತೆ ಕುರುಡನ ಮಾಡಯ್ಯ' ಎಂದು ಬಸವಣ್ಣ ಆರ್ತವಾಗಿ ಹೇಳಿದ್ದು ನೆನಪಾಗುತ್ತದೆ. ಹೌದು. ಎನ್ನ ಕುರುಡನ ಮಾಡು ಎಂದು ಸಂಯಮದ ದೊಡ್ಡದೊಂದು ಅರ್ಥದಲ್ಲಿ ಬಸವಣ್ಣ ಹೇಳಿದ್ದು. ಆದರೆ ಕಾಮಿಯ ಕಣ್ಣೂ ಕುರುಡಾಗಿರುತ್ತದೆ! ಕುರುಡಾದವರಿಗೆ ಪಾಪ ಪುಣ್ಯದ ಮಾತೇನು? ಕವಿ ಮುಂದೆ ಹೇಳುತ್ತಾನೆ. 'ಪಾಪವೋ ಪುಣ್ಯವೋ ತಿಳಿಯದದವರಿಗೆ, ನಿನ್ನ ಮುಖ ತೀರ್ಥಕೆಂದು ಬಂದೆ. ಶಾಪ ಕೊಡದಿರು ನನಗೆ, ತಿಳಿದ ಮೇಲ್ಮನಿಸಾಗಿ, ಹೇ ಕುವರಿ ಗೌರಿ ವಂದೇ.' ಈಗ ನಾಲ್ಕು ಕಣ್ಣೂ ಹತ್ತಿರವಾಗಿವೆ. ಎರಡು ಮುಖಗಳೂ ಹತ್ತಿರವಾಗಿವೆ. ನಡುವೆ ಈಗ ಪಾಪ ಪುಣ್ಯ ನುಸುಳದು. ಅದು ತಿಳಿಯದು.ಅಥವಾ ಪಾಪವಂತೂ ತಿಳಿಯದು. 'ಮುಖ ತೀರ್ಥ' ಎನ್ನುವ ಮಾತು ಪುಣ್ಯಾಹದ ಮಾತೇ ಸರಿ! ಆದರೂ ಕವಿಗೆ ಪುಣ್ಯದ ಮಾತು ಬಂದಾಗ ಪಾಪ– ಶಾಪಗಳು ನೆನಪಾಗದೆ ಉಳಿಯವು. ಇದು ಕಾಮಿಯಾದರೂ ಕವಿಯ ಪಾಡು! ಪರ – ವಿರೋಧ ಪದಗಳೆಲ್ಲ ಕವಿಗೆ ನೆನಪಾಗದೆ ಇರುವಂತಿಲ್ಲ. ಹಾಗೆ ಪಾಪ– ಶಾಪಗಳ ನೆನಪ. ಆದರೂ ಕವಿ– ಕಾಮಿ ಯಾರನ್ನು ನೆಚ್ಚಬೇಕು? ತಾನು ಹತ್ತಿರವಾದ ಕನ್ನೆಯನ್ನೆ ತಾನು ನೆಚ್ಚಬೇಕು. ಆಕೆ ಈಗ ಗೌರಿ! ವಂದನೀಯಳು. 'ಹೇ ಕುವರಿ ಗೌರಿ ವಂದೇ'.

ಈಗ ಅನುಭ ಇನ್ನೊಂದು ಮಜಲಿಗೆ ಹಾಯುತ್ತದೆ. 'ಮುಖ ತೀರ್ಥ'ದ ಅನುಭವ ತನ್ನನ್ನು ಶುದ್ಧ ಮಾಡುತ್ತಿದೆ. ಶುದ್ಧವೆಂದರೆ ನೋಟ ಶುದ್ಧವಾಗುವುದು. ಕಣ್ಣನೋಟದ ಲಾಲಸೆ ಅಳಿಯುವುದು. ಕನೀನಿಕೆ ಕಪ್ಪು ಚುಕ್ಕೆಯಾಗದೇ ಇರುವುದು; ನಿಜದ ನಕ್ಷತ್ರದಂತೆ ಮಿನುಗುವುದು. ಕವಿ ಹೇಳುತ್ತಾನೆ 'ಮುಖತೀರ್ಥದಲಿ ಮಿಂದು ದೃಷ್ಟಿ ಪಾವನವಾಗಿ ಬರಲೆಂದು ಹರಕೆ ಹೊತ್ತು. ಸುಖವಾಗಿ ನೋಡುತಿಹೆ; ಶುದ್ಧವಾಗುವುದೆಲ್ಲ ನಿನ್ನದದು ನಿನಗೆ ಗೊತ್ತು'

ನೀನು ಶುದ್ಧವಾಗಿಯೇ ಇರುವೆ. ನಿನ ಸನಿಯ ಬಂದವರೂ ಶುದ್ಧರಾಗದೇ ಇರುವರೇ?

ಈ ಹಂತದಲ್ಲಿ , ಇದುವರೆಗೆ ಮುಗ್ಧಕುವರಿಯಾಗಿದ್ದವಳು, ಗೌರಿಯಾದರೂ 'ಕುವರಿ–ಗೌರಿ'ಯಾಗಿಯೇ ಇದ್ದವಳು, ಈಗ ತಾಯಿಯಾಗುವಳು. ಅವ್ವನಾಗುವಳು. ತಾಯಿಯೊಡನೆ ಮಾತನಾಡುವಾಗ ಮಾತು; ವಾಚ್ಯವಾಗುವುದು. ವಾಚ್ಯವಾಗಿ ಬೇಡಿಕೆಯಾಗುವುದು. ಕನ್ನೆಯೊಡನೆ ಮಾತು ಕವಿತೆಯಾಗುತಿತ್ತು. ಸೂಕ್ಷ್ಮವಾಗುತ್ತಿತ್ತು. ನಾನಾ ಅರ್ಥಗಳಲ್ಲಿ ಹಾಯುತ್ತಿತ್ತು. ಈಗ ಮಾತು ನೇರ. ಪರೋಕ್ಷವಲ್ಲ. ಈಗಿನ ಹಾಡು ಇದು 'ಬಿಡದೆನ್ನ ನಿನ್ನೆದೆಯ ನೀರಿನಿಂದೆರೆದೆನ್ನ ಮನದುರಿಯನಾರಿಸವ್ವ, ಕುಡುಕುಮನವಿತ್ತೀಚೆ ಅಡಿಗಡಿಗೆ ಎಡವುತಿದೆ, ಪತನವ ನಿವಾರಿಸವ್ವ.'

ಕನ್ನೆ ತಾಯಿಯಾಗಿ ತಾನು ಬದಲಾಗಿ ನಮ್ಮನ್ನು ಬದಲಿಸುವಳು
ನಮ್ಮ ಮಾತನ್ನೇ ಬದಲಿಸುವಳು
ನಮ್ಮನ್ನೇ ನಾವು ಒಪ್ಪಿಕೊಳ್ಳುವಂತೆ ಮಾಡುವಳು
ನಮ್ಮಿಂದ ತಪ್ಪೊಪ್ಪಿಗೆಯ ಮಾತು ಹೊರಬರುವಂತೆ ಮಾಡುವಳು
ಶುದ್ಧೀಕರಣ ಎಂದರೆ ಇದೇ ಇರಬೇಕು
ಎಲ್ಲಿ ತಪ್ಪಾಗಿದೆಯೋ ಅಲ್ಲೇ ಸರಿಯಾಗುವ ದಾರಿ ಒಡಮೂಡುವುದು
ಪತನದಲ್ಲೇ ಉದ್ಧಾರದ ಬೀಜವಡಗಿರುವುದು.

ಸತ್ಯವನ್ನು ಅರಸುವ ವ್ಯವಧಾನ ಯಾರಿಗೂ ಇಲ್ಲ ಎನ್ನುವ 'ಭಜಗೋವಿಂದ ಹಾಡಿ'ನ ಮಾತಿಗೆ, ಸತ್ಯವನ್ನು ಅರಸುವ ವ್ಯವಧಾನ ಯಾವಾಗ, ಎಲ್ಲಿ, ಹೇಗೆ– ಬೇಕಾದರೂ ಉಂಟಾಗಬಹುದು ಎಂದೂ ಓದಿಕೊಳ್ಳಬಹುದು. ಬಸವಣ್ಣನವರ ಆ ಅದ್ಭುತವಾದ ಮಾತು ನೆನಪಾಗುತ್ತಿದೆ: 'ಕೂಡಲ ಸಂಗನ ನಿಲುವು ಕನ್ನೆಯ ಸ್ನೇಹದಂತೆ ಇದ್ದಿತ್ತು.'

**ತೋಷ**

## ಮಾತೇ ಮುತ್ತು

★ ಜೀವನದಲ್ಲಿ ಭಯ ಪಡುವಂತಹದ್ದು ಏನೂ ಇಲ್ಲ, ಎಲ್ಲವೂ ಅರ್ಥ ಮಾಡಿಕೊಳ್ಳಲು ಇರುವುದು. ಹೆಚ್ಚು ತಿಳಿದುಕೊಂಡಷ್ಟೂ ಭಯ ಕಡಿಮೆಯಾಗುತ್ತದೆ.

—ಮೇರಿ ಕ್ಯೂರಿ

★ ಅತಿಯಾಸೆಗಿಂತ ದೊಡ್ಡ ದುರಂತವಿಲ್ಲ.

-ಲಾವೋ ತ್ಸೆ

★ ದೀಪವೊಂದು ಉರಿಯುತ್ತಿದ್ದರೆ ಮಾತ್ರ ಅದರಿಂದ ಇನ್ನೊಂದು ದೀಪವನ್ನು ಹೊತ್ತಿಸಲು ಸಾಧ್ಯ. ಹಾಗೆಯೇ ಶಿಕ್ಷಕನೊಬ್ಬ ಕಲಿಯುತ್ತಿದ್ದರೆ ಮಾತ್ರ ಇನ್ನೊಬ್ಬರಿಗೆ ಕಲಿಸಲು ಸಾಧ್ಯ.

—ರಬೀಂದ್ರನಾಥ ಠಾಗೋರ್

★ ಜಗತ್ತಿನ ಎಲ್ಲ ಶಕ್ತಿಗಳೂ ನಮ್ಮೆದುರಿಗೇ ಇವೆ. ನಾವೇ ನಮ್ಮ ಕಣ್ಣುಗಳನ್ನು ಮುಚ್ಚಿಕೊಂಡು, ಅಯ್ಯೋ ಬೆಳಕಿಲ್ಲ ಎಂದು ಅಳುತ್ತಿದ್ದೇವೆ.

-ಸ್ವಾಮಿ ವಿವೇಕಾನಂದ

★ ಸಿದ್ಧನಾಗಿರು. ಒಂದು ದಿನ ನಿನ್ನ ಅವಕಾಶ ಬಂದೇ ಬರುತ್ತದೆ.

-ಅಬ್ರಹಾಂ ಲಿಂಕನ್